



ಲ ಪ್ಯಾಂಥಿಯಾನ್ ಸೌಧ

# ಲ ಪ್ಯಾಂಥಿಯಾನ್!

## ಮೇರಿ ಕ್ಯೂರಿಯ ಪ್ಯಾರಿಸ್ ಕಚೇರಿಯಲ್ಲಿ

**ಪ್ಯಾರಿಸ್‌ನಲ್ಲಿನ 'ಲ ಫ್ಯಾಂಥಿಯಾನ್' ವಿಶ್ವದ ಇಬ್ಬರು ಅಗ್ರಮಾನ್ಯ ವಿಜ್ಞಾನಿಗಳ ಸ್ಫೂರ್ತಿದಾಯಕ ಸ್ಮೃತಿಗಳನ್ನು ಹೊಂದಿದೆ. ಮೇರಿ ಕ್ಯೂರಿ ಹಾಗೂ ಪಿಯೆರಿ ಕ್ಯೂರಿಯ ಜೀವಿತದ ಕುರುಹುಗಳು ವಿಜ್ಞಾನಲೋಕಕ್ಕೆ ಕೊಡುಗೆಯೂ ಆಗಿವೆ.**

■ **ಸಿಡ್ನಿ ಶ್ರೀನಿವಾಸ್**

ಮೇರಿ ಕ್ಯೂರಿ ಮತ್ತು ಪಿಯೆರಿ ಕ್ಯೂರಿ ಇಬ್ಬರೂ ಅಪ್ರತಿಮ ವಿಜ್ಞಾನಿಗಳು. ಜೀವಿತ ಕಾಲದಲ್ಲಿ ಅವರಿಗೆ ಫ್ರಾನ್ಸ್ ದೇಶ ಅಂತಹ ಮನ್ನಣೆಯನ್ನೇನೂ ನೀಡಲಿಲ್ಲ. ಎರಡು ನೊಬೆಲ್ ಬಹುಮಾನ ಗಳಿಸಿದ್ದರೂ ಮೇರಿಗೆ 'ಫ್ರಾನ್ಸ್ ವಿಜ್ಞಾನ ಅಕಾಡೆಮಿ' ಸದಸ್ಯತ್ವ ನೀಡಲಿಲ್ಲ. ಗಂಡ–ಹೆಂಡತಿ ಇಬ್ಬರೂ ಸತತ ದುಡಿದಿದ್ದರೂ, ನೊಬೆಲ್‌ಗೆ ಹೆಸರನ್ನು ಸೂಚಿಸುವಾಗ ಮೇರಿಯ ಪ್ರೊಫೆಸರ್ ಆಗಿದ್ದವರೇ ತಮ್ಮ ಶಿಷ್ಯೆಯ ಹೆಸರನ್ನು ಕೈಬಿಟ್ಟಿದ್ದರು. ಫ್ರಾನ್ಸ್ ಎಚ್ಚೆತ್ತಿದ್ದು ತಡವಾಗಿ. ಮೇರಿ ತೀರಿಕೊಂಡು 60 ವರ್ಷಗಳ ನಂತರ, 1995ರಲ್ಲಿ ದೇಶಕ್ಕೆ ಜ್ಞಾನೋದಯವಾಯಿತು. ಅಂದು ಪ್ಯಾರಿಸ್ಸಿನ ಸೋ (Sceaux) ಬಡಾವಣೆಯಲ್ಲಿರುವ ರುದ್ರಭೂಮಿಯಿಂದ ಮೇರಿ ಮತ್ತು ಪಿಯೆರಿ ದಂಪತಿಯ ಅವಶೇಷಗಳನ್ನು ಹೊರತೆಗೆಯಲಾಯಿತು. ನಂತರ ಅವನ್ನು ಸುಟ್ಟು ಪ್ಯಾರಿಸ್ಸಿನ ಮಧ್ಯಭಾಗದಲ್ಲಿರುವ 'ಲ ಪ್ಯಾಂಥಿಯಾನ್' ಎಂಬಲ್ಲಿ ವೋಲ್ಟೇರ್, ರೂಸೋ ಮೊದಲಾದವರ ಸ್ಮಾರಕಗಳ ನಡುವೆ ಇರಿಸಲಾಯಿತು. ಇದು ಫ್ರಾನ್ಸ್ ದೇಶ ತನ್ನ ಪ್ರಜೆಗಳಿಗೆ ನೀಡಬಹುದಾದ ಅತ್ಯುನ್ನತ ಗೌರವ. ಕಿಕ್ಕಿರಿದ ಜನಸಂದಣಿಯ ಸಮ್ಮುಖದಲ್ಲಿ ಗೌರವ ಅರ್ಪಿಸಿದ ಫ್ರಾನ್ಸ್‌ನ ಅಧ್ಯಕ್ಷ ಮಿಟೇ ರಾಂಡ್, ಇದು ತಮ್ಮ ಅಧಿಕಾರದ ಕಡೆಯ ಭಾಷಣವೆಂದು ಘೋಷಿಸಿ ನಿವೃತ್ತರಾದರು.

ನಾವು, ಪ್ಯಾರಿಸ್ಸಿನಲ್ಲಿ 'ಗಾರ್ ದೊ ಲೆಯಾನ್' ರೈಲು ನಿಲ್ದಾಣದ ಬಳಿ ಠಿಕಾಣಿ ಹೂಡಿದ್ದವರು, ಬಸ್ ಹಿಡಿದು 'ಲ ಪ್ಯಾಂಥಿಯಾನ್' ತಲುಪಿದೆವು. ಯಾರಿಗಾದರೂ ಪ್ರಸನ್ನಭಾವ ಉಂಟುಮಾಡುವ ಸೌಧವದು. ಸುತ್ತಲೂ ರೆಸ್ಟೋರೆಂಟುಗಳು. ಒಳಗೆ ಅಂತಹ ಜನಸಂದಣಿ ಏನೂ ಇರಲಿಲ್ಲ. ಜನ ಪ್ರವೇಶ ಮಾಡುವ ಅಂತಸ್ತಿನಲ್ಲಿ ಏನೇನೋ ಪ್ರದರ್ಶನಗಳು. ಭವನದ ನೆಲಮಾಳಿಗೆಗೆ ಇಳಿದರೆ ಅಲ್ಲಿ ದಿವ್ಯ ಮೌನ. ವಿಶಾಲ ಪ್ರದೇಶದಲ್ಲಿ ಫ್ರಾನ್ಸಿನ ಮಹಾಪ್ರಜೆಗಳ ಸ್ಮಾರಕಗಳು. 'ನಂಬರ್ 8'ನೆಯ ಖಾನೆಯಲ್ಲಿ ನಮಗೆ ಬೇಕಾದ ಮೇರಿ ಮತ್ತು ಪಿಯೆರಿ ಕ್ಯೂರಿಗಳ